ಓ.ಎಸ್.ನಂ.**268/2014**

ಪಿ.ಡಬ್ಲೂ.**1**

ದಿನಾಂಕಃ 25.09.2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ವಿ. ಕೆ. ವಕೀಲರಿಂದ

ನಾನು ಈ ದಾವೆಯ ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಇಂದು ನ್ಯಾಯಾಲಯಕ್ಕೆ ಮನೆ ಮತ್ತು ಜಮೀನು ತೆರಿಗೆ ನಿರ್ದರಣ ಪಟ್ಟಿಗಳ 4 ದೃಢೀಕೃತ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ 4 ಎಂದು, ದಿಃ 12.05.1975 ರ ಕ್ರಯ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-5 ಎಂದು, 1969-70, 1983-84, 1996-97 ರ ಮನೆ ಮತ್ತು ಜಮೀನು ತೆರಿಗೆಯ ಮೂರು ನಿರ್ದರಣ ಪಟ್ಟಿಗಳನ್ನು ನಿಪಿ-6 ರಿಂದ 8 ಎಂದು, ಎರಡು ಭಾವಚಿತ್ರ ಹಾಗೂ ನೆಗೆಟಿವ್ ನ್ನು ನಿಪಿ-9 ರಿಂದ 11 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಎರಡು ನಮೂನೆ-3 ನ್ನು ನಿಪಿ-12 ಮತ್ತು 13 ಎಂದು, 20 ಕಂದಾಯ ಪಾವತಿ ರಶೀದಿಗಳನ್ನು ನಿಪಿ-14 ರಿಂದ 33 ಎಂದು ಗುರುತಿಸಲಾಯಿತು.

(ದಿಃ16.03.1961 ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆ ನೊಂದಾಯಿತವಲ್ಲದ ದಾಖಲಾತಿಯಾಗಿದ್ದು ಹಾಗೂ ಸದರಿ ದಾಖಲಾತಿಯನ್ವಯ ಸುಬರ್ದನ್ನು ಬಿಟ್ಟು ಕೊಟ್ಟಿದ್ದರಿಂದ, ಅದನ್ನು ಕಡ್ಡಾಯವಾಗಿ ನೊಂದಣಿ ಮಾಡಬೇಕಾಗಿರುವುದರಿಂದ, ದಾಖಲು ಮಾಡಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಸದರಿ ತಕರಾರು ಸುನಾವಣೆಗಾಗಿ ಕಾಲಾವಕಾಶ ಕೋರಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.